ವಿಶ್ವವಾಣಿ

ಸಂಪಾದಕೀಯ

ತರಕಾರಿ ಬೆಲೆ ಏರಿಕೆ ನಿಯಂತ್ರಣ ಸಾಧ್ಯವಿಲ್ಲವೇ?

ರಾಜ್ಯದಲ್ಲಿ ಅತಿವೃಷ್ಟಿ, ಅನಾವೃಷ್ಟಿಯಾದಾಗ ತರಕಾರ ಬೆಲೆ ಗಗನಕ್ಕೇರುತ್ತದೆ. ಈಗ ಮಳೆ ಹಾನಿಯಿಂದ ನಿರಂತರ ಏರಿಕೆ ಕಂಡಿರುವ ಟೊಮೆಟೊ ದರ ಒಂದು ಕೆ.ಜಿ.ಗೆ ನೂರು ರುಪಾಯಿಯ ಆಸುಪಾಸಿನಲ್ಲಿದೆ. ಆದರೆ ಇನ್ನಿತರ ತರಕಾರಿ, ಹೂವು, ಸೊಪ್ಪು, ಹಣ್ಣುಗಳ ದರವೂ ಇದೇ ರೀತಿ ಏರಿಕೆಯಾಗಿದ್ದು ಇವೆಲ್ಲವೂ ಸಾಮಾನ್ಯರ ಕೈಗೆಟುಕದಂತೆ ಮುಗಿಲು ಮುಟ್ಟಿವೆ. ಏರಿದ ಬೆಲೆಯಿಂದಾಗಿ ಸಾಮಾನ್ಯ ಜನರು ಊಟ ಉಪಚಾರಕ್ಕೇ ಪರದಾಡುವಂತಹ ಸ್ಥಿತಿ ನಿರ್ಮಾಣವಾಗಿದೆ. ಅತಿವೃಷ್ಟಿ, ಅನಾವೃಷ್ಟಿಯಿಂದ ನಿರ್ಮಾಣವಾದ ಬೆಲೆ ಏರಿಕೆ ಪರಿಸ್ಥಿತಿಗೆ ನಿಯಂತ್ರಣ ತರಲು ಸಾಧ್ಯವೇ ಇಲ್ಲವೆಂಬಂತೆ ಅಧಿಕಾರಿಗಳೂ ಕೈಕಟ್ಟಿ ಕುಳಿತುಕೊಂಡಂತಿದೆ. ಅದರ ವ್ಯತಿರಿಕ್ತ ಪರಿಣಾಮ ನಗರದ ಜನಜೀವನದ ಮೇಲೆ ಆಗುತ್ತದೆ. ಇದನ್ನು ತಪ್ಪಿಸಲು ಹಲವು ಮಾರ್ಗಗಳಿದ್ದರೂ ರೈತರು ಮತ್ತು ಅಧಿಕಾರಿಗಳ ಇಚ್ಛಾಶಕ್ತಿ ಕೊರತೆಯಿಂದ ಅದು ಸಾಧ್ಯವಾಗುತ್ತಿಲ್ಲ. ಬರ, ನೆರೆ ಇಡೀ ರಾಜ್ಯಾದ್ಯಂತ ಏಕಾಏಕಿ ಸಂಭವಿಸುವುದಿಲ್ಲ. ಕೆಲ ಜಿಲ್ಲೆಗಳಲ್ಲಿ ಬರಗಾಲ ಪರಿಸ್ಥಿತಿ ನಿರ್ಮಾಣವಾಗಿದ್ದರೆ, ಇನ್ನು ಕೆಲವು ಜಿಲ್ಲೆಗಳಲ್ಲಿ ವಿಪರೀತ ಮಳೆಯಾಗುತ್ತದೆ. ಇದು ನಮ್ಮ ರಾಜ್ಯದ ಭೌಗೋಳಿಕ ವೈಶಿಷ್ಟ್ಯ. ರೈತರು ಹಣದ ಬೆನ್ನು ಬಿದ್ದು ವಾಣಿಜ್ಯ ಬೆಳೆಗಳನ್ನು ಬೆಳೆಯುವ ಬದಲು, ಇದ್ದ ಜಮೀನಿನಲ್ಲೇ ಸ್ವಲ್ಪ ವಾಣಿಜ್ಯ ಬೆಳೆ ಬೆಳದು, ಇನ್ನು ಸ್ವಲ್ಪ ತರಕಾರಿ, ಹೂ, ಹಣ್ಣುಗಳನ್ನು ಬೆಳೆಯಲು ಆಸಕ್ತಿ ವಹಿಸಿದರೆ ಅತಿವೃಷ್ಟಿ, ಅನಾವೃಷ್ಟಿಯಲ್ಲೂ ತರಕಾರಿ ಬೆಲೆ ಮೇಲೆ ನಿಯಂತ್ರಣ ಸಾಧಿಸಬಹುದು. ತರಕಾರಿ ಬೆಳೆಯನ್ನು ಪ್ರೋತ್ಸಾಹಿಸಲು ತೋಟಗಾರಿಕೆ ಇಲಾಖೆಗಳಲ್ಲಿ ಹಲವಾರು ಯೋಜನೆ, ಸಬ್ಸಿಡಿಗಳಿವೆ. ಅಧಿಕಾರಿಗಳು ಆ ಯೋಜನೆಗಳ ಬಗ್ಗೆ ರೈತರಿಗೆ ಸೂಕ್ತ ಮಾಹಿತಿ ನೀಡಬೇಕಿದೆ. ಎಲ್ಲವೂ ಕಳಪೆ ಇರುವ ಈ ಕಾಲದಲ್ಲಿ ಪೌಷ್ಟಿಕ ಆಹಾರವಾದ ಹಣ್ಣು, ತರಕಾರಿಗಳನ್ನು ಅಗತ್ಯ ಹೆಚ್ಚಾಗಿರುವುದನ್ನು ಅರಿತು, ಆ ಬೆಳೆಗಳನ್ನು ಬೆಳೆಯಲು ರೈತರು ಇಚ್ಛಾಶಕ್ತಿ ಪ್ರದರ್ಶಿಸಬೇಕಿದೆ. ಇಲ್ಲವಾದಲ್ಲಿ ಇಡೀ ರಾಜ್ಯವನ್ನೇ ಅಪೌಷ್ಟಿಕತೆಯತ್ತ ತಳ್ಳಿದಂತಾಗುತ್ತದೆ.

ಸೊಂಪಾದಕೀಯ

ಕೆನ್ನೆಯಿಂದ ಗಲ್ಲದವರೆಗಿನ ರಸ್ತೆ!

ಅದ್ಯಾವಾಗ ಇವರೆಲ್ಲ, ಬಾಲಿವುಡ್ ನಟಿಯರ ಕೆನ್ನೆ, ಗಲ್ಲ ಸವರಿ ನೋಡುತ್ತಾರೋ, ಅವನ್ನೆಲ್ಲ ತಂದು ಅದ್ಯಾಕೆ ರಸ್ತೆಗೆ ಹಾಕುತ್ತಾರೋ ಗೊತ್ತಿಲ್ಲ. ಇತ್ತೀಚೆಗಷ್ಟೇ ರಾಜಸ್ಥಾನ ಸರಕಾರದ ನೂತನ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ರಾಜೇಂದ್ರ ಸಿಂಗ್ ಗುಢಾ ಅವರು ನೀಡಿರುವ ಹೇಳಿಕೆಯೊಂದು ಸಿಕ್ಕಾಪಟ್ಟೆ ನೈಸಾಗಿ ಸೋಷಿಯಲ್ ಮೀಡಿಯಾಗಳಲ್ಲಿ ಜಾರಿಹೋಗುತ್ತಿದೆ. ನುಣುಪು ರಸ್ತೆಗಳನ್ನು ನಟಿ ಕತ್ರೀನಾ ಕೈಫ್ ಕೆನ್ನೆಗಳಿಗೆ ಹೋಲಿಸಿ ಅವರು ಮಾತಾಡಿದ ವಿಡಿಯೊ ವೈರಲ್ ಆಗಿದೆ. ಏನಾಯ್ತಪ್ಪ ಅಂದ್ರೆ, ಗ್ರಾಮಗಳ ರಸ್ತೆಗಳ ದುಃಸ್ಥಿತಿಯ ಬಗ್ಗೆ ಜನರು ಅಲವತ್ತುಕೊಳ್ಳುತ್ತಿದ್ದಂತೆ ಆವೇಶದಲ್ಲಿ ಅಧಿಕಾರಿಗಳತ್ತ ತಿರುಗಿದ ಸಚಿವರು 'ನೋಡ್ರಿ, ರಸ್ತೆಗಳೆಲ್ಲ ಹೇಮಾಮಾಲಿನಿ ಕೆನ್ನೆಯಂತಾಗಬೇಕು' ಅಂತ ಹೇಳಲು ಹೊರಟರು. ಅಷ್ಟರಲ್ಲಿ ಆ ಪುಣ್ಯಾತ್ಮನಿಗೆ ಈಗ ಹೇಮಾಮಾಲಿನಿಗೆ ವಯಸ್ಸಾಗಿಹೋಗಿದೆ ಎಂಬುದು ನೆನಪಾಗಿ, ಅವರ ಕೆನ್ನೆಯಲ್ಲಿ ಬಂದಿರಬಹುದಾದ ಸುಕ್ಕುಗಳಂತೇ ರಸ್ತೆಗಳೂ ಆಗಿಬಿಟ್ಟರೆ? ಅಂತನ್ನಿಸಿರಬೇಕು. ಅಥವಾ ಜನ ಎಲ್ಲ ನಿರಾಶರಾಗಿಬಿಡಬಹುದು ಎಂದೂ ಇರಬಹುದು. ತಕ್ಷಣ ಅವರ ಬಾಯಿ(ಮಾತಿಗೆ)ಗೆ ಸಿಕ್ಕವಳು ಕತ್ರೀನಾ ಕೈಫ್! ಕೆನ್ನೆಯಿಂದ ಸ್ವಲ್ಪ ಜಾರಿದ ಸಚಿವರು, ಆಕೆಯ ಗಲ್ಲದಂತೆ ನುಣುಪಾಗಿ ರಸ್ತೆ ಮಾಡಬೇಕೆಂದು ಅಧಿಕಾರಿಗಳಿಗೆ ಸೂಚಿಸಿಬಿಟ್ಟರು. ಅಷ್ಟೇ, ಮೊದಲು ಕಳಾಹೀನರಾಗಿದ್ದ ಮಂದಿ ಇದ್ದಕ್ಕಿದ್ದಂತೆ ಚಪ್ಪಾಳೆ ತಟ್ಟಿ ಕೇಕೆ ಹಾಕುತ್ತಾ ಸ್ವಾಗತಿಸಿದರು. ರಸ್ತೆಗಳೆಲ್ಲವೂ ಆಕೆಯ ಕೆನ್ನೆಗಳಾದರೆ, ಏನೇನು ಮಾಡಬಹುದು ಅಂತ ಕೆಲವರು ಕನಸುಕಾಣಲೂ ತೊಡಗಿರಬಹುದು! ಅಲ್ಲೇ ಹಿಂದಿನಿಂದ ಯಾರೋ ಒಬ್ಬ 'ಕತ್ರಿನಾ ಗಲ್ಲದಲ್ಲಿ ಗುಳಿ ಬೀಳುತ್ತೆ, ರಸ್ತೆಗಳಲ್ಲೂ ಹಾಗೇ ಗುಂಡಿ ಇರುತ್ತಾ ಹಾಗಾದ್ರೆ?' ಅಂದದ್ದು ಯಾರಿಗೆ ಕೇಳಿಸಿತೋ ಬಿಡ್ತೋ, ಅಂತೂ ಸಚಿವರು ಜೋಷ್‌ನಲ್ಲೇ ಇದ್ದರು. ಹಿಂದೊಮ್ಮೆ ನಮ್ಮ ಲಾಲೂ ಯಾದವ್ ಹೀಗೆಯೇ ಹೇಮಾಮಾಲಿನಿ ಕೆನ್ನೆಯನ್ನು ಎಳೆದು ತಂದು ವಿವಾದಕ್ಕೀಡಾಗಿದ್ದರು. ಇವ್ರಿಗೆಲ್ಲ ನಟಿಯರ ಮುಖಕ್ಕೆ ಎಷ್ಟು ಬಣ್ಣ ಮೆತ್ತಿರಬಹುದು ಎಂಬ ಅಂದಾಜಿಲ್ಲವೋ, ಅಥವಾ ರಸ್ತೆಗಳನ್ನೂ ಮೇಲಿಂದ ಮಾತ್ರ ಹಾಗೆಯೇ ಟಾರು ಮೆತ್ತಿ ಕಣ್ಣಕಟ್ಟು ಮಾಡಿ ಅನ್ನೋದನ್ನು ಪರೋಕ್ಷ ಸೂಚಿಸುತ್ತಾರೋ ಗೊತ್ತಾಗುತ್ತಿಲ್ಲ.ಅಷ್ಟಕ್ಕೂ ನೈಸಾಗೇ ಇದ್ದರೂ ವಾಹನಗಳೆಲ್ಲ ಜಾರಿಹೋಗಿ, ಆಕ್ಸಿಡೆಂಟ್ ಆಗೋಗಲ್ವಾ?

ಸಂಪಾದಕರ ಸದ್ಯಶೋಧನೆ

ಚಮ್ಮಾರ ಹೇಳಿದ ಅಧ್ಯಾತ್ಮ

ಸಂಜಯ ಮೆಹ್ರಾ ಎಂಬುವವರು ಬರೆದ The Cobbler who also mends Souls ಎಂಬ ಪುಟ್ಟ ಬರಹವನ್ನು ನಿಮಗೆ ಹೇಳಲೇಬೇಕು. ನನ್ನ ಆಫೀಸಿನ ಎದುರಿನ ರಸ್ತೆಯಲ್ಲಿ ಒಬ್ಬ ಚಮ್ಮಾರನಿದ್ದಾನೆ. ಪ್ರತಿದಿನ ಆತ ಬರುತ್ತಿದ್ದಂತೆ, ಅವನ ಪಕ್ಕದಲ್ಲಿ ಒಂದು ಬೀದಿ ನಾಯಿ ಬಂದು ಕುಳಿತುಕೊಳ್ಳುತ್ತದೆ. ಆತ ಅದಕ್ಕೆ ಬಿಸ್ಕತ್, ಮನೆಯಿಂದ ತಂದ ಅನ್ನವನ್ನು ಹಾಕುತ್ತಾನೆ. ಆ ನಾಯಿ ದಿನವಿಡೀ ಅವನ ಪಕ್ಕದಲ್ಲಿಯೇ ಕುಳಿತಿರುತ್ತದೆ. ಅವರಿಬ್ಬರ ಮಧ್ಯೆ ಏನೋ ಒಂದು ಸಂಬಂಧ ಇದ್ದಿರಬಹುದು ಎಂದು ನನಗೆ ಅನಿಸುತ್ತಿದೆ. ಆದರೆ ಆ ಚಮ್ಮಾರ, ನಾಯಿಯೊಂದಿಗೆ ಮಾತಾಡುವುದಿಲ್ಲ. ಆದರೂ ಅದು ಅವನ ಬಳಿಯೇ ಕುಳಿತಿರುತ್ತದೆ. ಮನೆಯಿಂದ ಬರುವಾಗ ಆತ ಎರಡು ಮುಷ್ಟಿ ಅಕ್ಕಿಕಾಳು ತಂದು ಅಕ್ಕ-ಪಕ್ಕ ಬಿಸಾಡುತ್ತಾನೆ. ಹಕ್ಕಿಗಳು ಬಂದು ತಿಂದು ಹಾರಿಹೋಗುತ್ತವೆ. ದಾರಿಹೋಕರು ಆ ಚಮ್ಮಾರನ ಸನಿಹ ಬಂದು ದಾರಿ ಕೇಳುತ್ತಾರೆ. ಅದರಿಂದ ಅವನಿಗೆ ಏನೂ ಲಾಭವಿಲ್ಲದಿದ್ದರೂ, ನಗುನಗುತ್ತ ಅವರಿಗೆ ದಾರಿ ಹೇಳುತ್ತಾನೆ. ಯಾರಾದರೂ ಬಾಯಾರಿ ಬಂದರೆ, 'ನೀರು ಬೇಕಾ?' ಎಂದು ಕೇಳುತ್ತಾನೆ. ನೀರು ಕುಡಿಯಲು ಕುಳಿತರೆ, ಅವರೊಂದಿಗೆ ಉಭಯಕುಶಲೋಪರಿ ಮಾತಾಡುತ್ತಾನೆ. ಹಾಗಂತ ಅವರಿಬ್ಬರಿಗೂ ಸಂಬಂಧವಿರುವುದಿಲ್ಲ. ದಿನವೂ ಕನಿಷ್ಠ ಐದಾರು ಜನರಿಗೆ ಆತ ಹೀಗೆ ನೀರು ಕೊಡುತ್ತಾನೆ, ಮಾತಾಡುತ್ತಾನೆ. ಮಕ್ಕಳು ಹಸಿದು ಬಂದರೆ ಅವರಿಗೂ ಬಿಸ್ಕತ್ ಕೊಡುತ್ತಾನೆ. ನಾಯಿ ಇವೆಲ್ಲವನ್ನೂ ಸುಮ್ಮನೆ ನೋಡುತ್ತ ಕುಳಿತಿರುತ್ತದೆ. ಒಂದು ದಿನ ಅವನ ಜತೆ ಮಾತಾಡಬೇಕು ಎಂದು ನನಗೆ ಅನಿಸಿತು. ನಾನು ಅವನ ಹತ್ತಿರ ಹೋಗಿ, ನನ್ನ ಹೆಸರು ಹೇಳಿ ಪರಿಚಯ ಮಾಡಿಕೊಂಡೆ. ಆತ ತನ್ನ ಹೆಸರು ದಯಾರಾಮ ಎಂದು ಹೇಳಿದ. 'ಸಾರ್, ಚಹಾ ಕುಡಿಯುತ್ತೀರಾ?' ಎಂದು ಕೇಳಿದ. ನನಗೆ ತುಸು ಅಚ್ಚರಿಯಾಯಿತು. 'ಖಂಡಿತ, ಚಹಾ ಕುಡಿಯೋಣ' ಎಂದೆ. ದಯಾರಾಮ ದಿನಕ್ಕೆ ನೂರಿನ್ನೂರು ರುಪಾಯಿ ಗಳಿಸಬಹುದು. ಪ್ರತಿದಿನ ನಾಯಿಗೆ, ಪಕ್ಷಿಗಳಿಗೆ ಕಾಳು ಹಾಕುತ್ತಾನೆ, ಹಸಿದವರಿಗೆ ಬಿಸ್ಕತ್ ಕೊಡುತ್ತಾನೆ. ನೀರು ಕೊಡುತ್ತಾನೆ. ಅಷ್ಟೂ ಸಾಲದೆಂಬಂತೆ ಈಗ ಎರಡು ಕಪ್ ಚಹಾ ಬೇರೆ. ಆತನ ಮುಖದಲ್ಲಿ ಬೇಸರ, ನೋವಿನ ಗೆರೆಗಳೇ ಇಲ್ಲ. ಮುಖದಲ್ಲಿ ಏನೋ ಆನಂದ. ನಾನು ಅವನಿಗೆ, 'ದಯಾರಾಮ, ನಾನು ನಿನ್ನನ್ನು ದಿನಾ ನೋಡುತ್ತಿದ್ದೇನೆ, ಅವೆಷ್ಟೋ ವರ್ಷಗಳಿಂದ. ಪ್ರತಿದಿನ ನೀನು ಹೀಗೆ ಇರುತ್ತೀಯ. ನನಗೆ ನಿನ್ನನ್ನು ನೋಡಿದರೆ ಬಹಳ ಖುಷಿ' ಎಂದೆ. ಆತ ತುಸು ಸಂಕೋಚದಿಂದಲೇ ನಕ್ಕ. ಅವನ ನಾಯಿಯನ್ನು ನೋಡುತ್ತಿದ್ದಂತೆ, ಆತ ಹೇಳಿದ – 'ಸರ್, ಇವನು ನಮ್ಮಲ್ಲೊಬ್ಬ. ಇದು ಭಗವಂತನ ಸೃಷ್ಟಿ. ನಾನೇನೂ ಅವನಿಗೆ (ನಾಯಿಗೆ) ಮಾಡುತ್ತಿಲ್ಲ. ಆ ಭಗವಂತ ನನ್ನ ಮೂಲಕ ಮಾಡಿಸುತ್ತಿದ್ದಾನೆ. ನಾನೇ ಈ ನಾಯಿಯ ಹೊಟ್ಟೆ ಹೊರೆಯುತ್ತಿದ್ದೇನೆ ಅಂದ್ರೆ ತಪ್ಪಾದೀತು' ಅವನನ್ನು ಭೇಟಿ ಮಾಡಿದ್ದು ನನಗೆ ಅತೀವ ಆನಂದವಾಯಿತು. ನಾನು ಅವನಿಗೆ ನಮಸ್ಕರಿಸಿ, ಬರುವ ಮುನ್ನ ಸ್ವಲ್ಪ ಹಣ ಕೊಡಲು ಪರ್ಸಿಗೆ ಕೈಹಾಕಿದೆ. ಆದರೆ ಆತ ಸ್ವೀಕರಿಸಲಿಲ್ಲ. ಆಗ ನಾನು 'ಇದು ನನ್ನ ಹಣವಲ್ಲ. ಆ ಭಗವಂತನ ಹಣ. ನನ್ನ ಮೂಲಕ ನಿನಗೆ ಕೊಡುತ್ತಿದ್ದಾನೆ ಅಷ್ಟೇ' ಎಂದಾಗ ತೆಗೆದುಕೊಂಡ. ನಾನು ಅಲ್ಲಿಂದ ಬರುವಾಗ ಆತ ಹೇಳಿದ – 'ಅವನಿಂದ (ದೇವರು) ಕೇಳು.. ಖುಷಿಯಿಂದ ಬೇರೆಯವರಿಗೆ ಕೊಡು.. ಯಾವುದೂ ನಿನ್ನದಲ್ಲ.. ಹೀಗಾಗಿ ಬಚ್ಚಿಡಬೇಡ... ಎಲ್ಲವನ್ನೂ ಮೌನವಾಗಿ ನಗುನಗುತ್ತಾ ಮಾಡು.'ಕೊನೆಯಲ್ಲಿ ಸಂಜಯ ಮೆಹ್ರಾ ಬರೆಯುತ್ತಾರೆ & The cobbler who mends shoes, mended my soul too today.

ನಾನ್ಯಾಕೆ ಯೂಟ್ಯೂಬ್ ಚಾನೆಲ್ ಮಾಡಿಲ್ಲ

ಇಂದು ನಾವು ಈ ಗದ್ದಲದ ಕರ್ಕಶ ಸಂತೆಯಲ್ಲಿ ಬದುಕುತ್ತಿದ್ದೇವೆ. ಒಂದೆರಡು ಒಳ್ಳೆಯ ಚಾನೆಲ್‌ಗಳಿಗಾಗಿ ಅರಸಿಕೊಂಡು ಹೋಗುವ ಭರದಲ್ಲಿ, ಉಳಿದ ಚಾನೆಲ್ ಬಳ್ಳಿಗಳು ಕಾಲಿಗೆ ಸುತ್ತಿಕೊಂಡು ತಡಸಿ, ಮುಗ್ಗರಿಸಿ ಬೀಳುವಂತಾಗಿದೆ. ಈ ಚಾನೆಲ್ ಗೊಂಡಾರಣ್ಯದಲ್ಲಿ ಬರೀ ಮಾತುಗಳೇ, ಸದ್ದು-ಸಪ್ಪಳಗಳೇ.

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್

vbhat@me.com

ಇತ್ತೀಚಿನ ದಿನಗಳಲ್ಲಿ ಅಲ್ಲಲ್ಲಿ, ಆಗಾಗ ನಾನು ಎದುರಿಸುವ ಪ್ರಶ್ನೆಗಳಲ್ಲಿ, 'ಭಟ್ರೇ, ನೀವ್ಯಾಕೆ ಒಂದು ಯೂಟ್ಯೂಬ್ ಚಾನೆಲ್ ಮಾಡಬಾರದು? ಇಲ್ಲೀತನಕ ನೀವ್ಯಾಕೆ ಅಂಥ ಪ್ರಯೋಗಕ್ಕೆ ಮುಂದಾಗಿಲ್ಲ?' ಎಂಬುದು. ಅದಕ್ಕೆ ನಾನು, 'ಹೌದು.. ಮಾಡಬೇಕಿತ್ತು. ಆದರೆ ನನಗೆ ಅಂಥದ್ದೊಂದು ಚಾನೆಲ್ ಮಾಡಬೇಕೆಂದು ಎಂದೂ ಅನಿಸಲೇ ಇಲ್ಲ ನೋಡಿ' ಎಂದು ಹೇಳಿದಾಗ, ಆ ಪ್ರಶ್ನೆ ಕೇಳಿದವರು ನನಗೆ ಒಂದು ಬೌದ್ಧಿಕ್ ಕೊಡುತ್ತಾರೆ. 'ಈ ದಿನಗಳಲ್ಲಿ ಜನರಿಗೆ ಓದಲು ಪುರುಸೊತ್ತಿಲ್ಲ. ಎಲ್ಲರೂ ಡಿಜಿಟಲ್ ಮಾಧ್ಯಮದತ್ತ ವಾಲುತ್ತಿದ್ದಾರೆ. ಯೂಟ್ಯೂಬ್ ನಲ್ಲಿ ಮಾತಾಡಿದರೆ, ನೀವು ಬರೆದಿದ್ದಕ್ಕಿಂತ ಹೆಚ್ಚು ಜನರಿಗೆ ತಲುಪುತ್ತದೆ. ಬಹಳ ಬೇಗ ವೈರಲ್ ಆಗುತ್ತದೆ. ಇದರಿಂದ ಹಣವನ್ನೂ ಗಳಿಸಬಹುದು. ಹೀಗಿರುವಾಗ ನೀವ್ಯಾಕೆ ಯೂಟ್ಯೂಬ್ ಚಾನೆಲ್ ಮಾಡಬಾರದು?' ಎಂದು ಉಪದೇಶ ಕೊಡುತ್ತಾರೆ. ನನ್ನ ಬಗ್ಗೆ ಇಷ್ಟೆಲ್ಲ ಆಸ್ಥೆವಹಿಸುವ ಅವರ ಕಾಳಜಿಗೆ ವಂದಿಸಿ ಮುನ್ನಡೆಯುತ್ತೇನೆ.

ಈ ಬೌದ್ಧಿಕ್ ನೀಡಿದ ಸ್ನೇಹಿತರು, ಹಿತೈಷಿಗಳು ಹೇಳುವುದು ಸುಳ್ಳಲ್ಲ. ಅವರ ಮಾತುಗಳನ್ನು ತಳ್ಳಿ ಹಾಕುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಡಿಜಿಟಲ್ ಮಾಧ್ಯಮ ಪ್ರವರ್ಧಮಾನಕ್ಕೆ ಬರುತ್ತಿದೆ. ಯೂಟ್ಯೂಬ್ ಅತ್ಯಂತ ಜನಪ್ರಿಯ ಮಾಧ್ಯಮ. 2005 ರ ಫೆಬ್ರವರಿಯಲ್ಲಿ ಯೂಟ್ಯೂಬ್ ಅಸ್ತಿತ್ವಕ್ಕೆ ಬಂದಿತು. ಅದರ ಸಂಸ್ಥಾಪಕರಲ್ಲೊಬ್ಬರಾದ ಜಾವೆದ್ ಕರೀಂ Me at the zoo ಎಂಬ 18 ಸೆಕೆಂಡುಗಳ ವಿಡಿಯೋ ಕ್ಲಿಪ್ ಅಪ್ಲೋಡ್ ಮಾಡಿದರು. ಅದನ್ನು ಇಲ್ಲಿ ತನಕ ವಿಶ್ವದೆಲ್ಲೆಡೆ ಸುಮಾರು 126 ದಶಲಕ್ಷ ಸಲ ವೀಕ್ಷಿಸಿದ್ದಾರೆ.

ಇಂದು ಏನಿಲ್ಲವೆಂದರೂ 230 ಕೋಟಿ ಮಂದಿ ಕ್ರಿಯಾಶೀಲ ಯೂಟ್ಯೂಬ್ ಬಳಕೆದಾರರಿದ್ದಾರೆ. ವಿಶ್ವದ ಇಂಟರ್ನೆಟ್ ಬಳಸುವವರಲ್ಲಿ ಪ್ರತಿ ತಿಂಗಳು ಯೂಟ್ಯೂಬ್ ನ್ನು ಶೇ.43ರಷ್ಟು ಮಂದಿ ಬಳಸುತ್ತಾರೆ. ಪ್ರತಿದಿನ ಜಗತ್ತಿನಾದ್ಯಂತ ನೂರು ಕೋಟಿಗಿಂತ ಹೆಚ್ಚು ಗಂಟೆ ಯೂಟ್ಯೂಬ್‌ಗಾಗಿ ವ್ಯಯವಾಗುತ್ತಿದೆ. 2006ರಲ್ಲಿ 20 ದಶಲಕ್ಷದಷ್ಟಿದ್ದ ಯೂಟ್ಯೂಬ್ ಬಳಕೆದಾರರ ಸಂಖ್ಯೆ, 2020ರ ಹೊತ್ತಿಗೆ ಇನ್ನೂರು ಕೋಟಿ ದಾಟಿದ್ದು ಅಸಾಧಾರಣ ಸಾಧನೆಯೇ. ಇದು ಯೂಟ್ಯೂಬ್ ಲೋಕಪ್ರಿಯತೆಗೆ ಹಿಡಿದ ಕನ್ನಡಿ. ಸಾಮಾಜಿಕ ಜಾಲತಾಣಗಳಲ್ಲಿ ಫೇಸ್ ಬುಕ್‌ಗೆ ಅಗ್ರತಾಂಬೂಲ. ನಂತರದ ಎರಡನೇ ಸ್ಥಾನ ಯೂಟ್ಯೂಬ್‌ಗೆ. ಮುಂದಿನ ಮೂರನೇಯದು ವಾಟ್ಸಾಪ್‌ಗೆ.

ವಿಶ್ವದಲ್ಲಿ ಭಾರತದಲ್ಲೇ ಅತಿಹೆಚ್ಚು ಅಂದರೆ 225 ದಶಲಕ್ಷ ಯೂಟ್ಯೂಬ್ ಬಳಕೆದಾರರಿದ್ದಾರೆ. ಅಮೆರಿಕದಲ್ಲಿ ಈ ಪ್ರಮಾಣ 197 ದಶಲಕ್ಷ. 15 ರಿಂದ 35 ವರ್ಷದವರು ಹೆಚ್ಚಾಗಿ ಯೂಟ್ಯೂಬ್ ಅನ್ನು ವೀಕ್ಷಿಸುತ್ತಾರೆ. ಗಂಡಸರಿಗಿಂತ ಹೆಂಗಸರೇ ಹೆಚ್ಚಾಗಿ ಯೂಟ್ಯೂಬ್ ವೀಕ್ಷಿಸುತ್ತಾರೆ. ನಾಲ್ಕು ತಿಂಗಳಿಗೆ ಯೂಟ್ಯೂಬ್ ಆದಾಯ ಏಳು ಶತಕೋಟಿ ಡಾಲರ್. ಸರಾಸರಿ ಪ್ರತಿ ಒಂದು ಸಾವಿರ ಮಂದಿ ವೀಕ್ಷಿಸಿದರೆ, ಮೂರರಿಂದ ಐದು ಡಾಲರ್ ಹಣ ಕಂಟೆಂಟ್ ಅಪ್ಲೋಡ್ ಮಾಡಿದ ವ್ಯಕ್ತಿಗೆ ಸಿಗುತ್ತದೆ. ಇಷ್ಟಾದ ಬಳಿಕ ಇನ್ನೊಂದು ಮಹತ್ವದ ಸಂಗತಿ ಹೇಳುತ್ತೇನೆ. ಅದೇನೆಂದರೆ, ಶೇ.96 ರಷ್ಟು ಯೂಟ್ಯೂಬ್ ಚಾನೆಲ್‌ಗಳು 10,000 ಕ್ಕಿಂತ ಕಡಿಮೆ ಸದಸ್ಯರನ್ನು ಅಥವಾ ಚಂದಾದಾರರನ್ನು ಹೊಂದಿವೆ. ಸ್ಮಾರ್ಟ್ ಫೋನ್ ಸಾರ್ವತ್ರಿಕವಾಗುತ್ತಿದ್ದಂತೆ, ಯೂಟ್ಯೂಬ್ ಅದೃಷ್ಟವೂ ಖುಲಾಯಿಸಿತು. ಗೂಗಲ್ ಪ್ಲೇ ಸ್ಟೋರ್ಸ್‌ನಲ್ಲಿ ಒಂದೂ ಮುಕ್ಕಾಲು ಶತಕೋಟಿ ಯೂಟ್ಯೂಬ್ ಆಪ್ ಡೌನ್ ಲೋಡ್ ಆಗಿದೆ ಅಂದರೆ ಅದರ ಬೆಳವಣಿಗೆಯ ಅಗಾಧತೆಯನ್ನು ಊಹಿಸಬಹುದು. ಭಾರತದ ಟಿ-ಸೀರಿಸ್ (ಮ್ಯೂಸಿಕ್) ಅತಿ ಹೆಚ್ಚು ಅಂದರೆ, 192 ದಶಲಕ್ಷ ಚಂದಾದಾರನ್ನು ಹೊಂದಿದೆ.

ಯೂಟ್ಯೂಬ್ ಯಶಸ್ಸಿನ ಸಮರ್ಥನೆಗೆ ಇದಕ್ಕಿಂತ ಮಿಗಿಲಾದ ಅಂಶಗಳೇನು ಬೇಕು? ಕ್ಷಣಮಾತ್ರದಲ್ಲಿ ವಿಶ್ವದಾದ್ಯಂತ ಒಂದು ವಿಡಿಯೋವನ್ನು ಪರಿಣಾಮಕಾರಿಯಾಗಿ ವೈರಲ್ ಮಾಡಲು ಸಾಧ್ಯವಾಗುವುದು ಯುಟ್ಯೂಬಿನಿಂದ ಸಾಧ್ಯ. ಆ ಪ್ರಮಾಣದಲ್ಲಿ ಅದು ಬೆಳೆದಿದೆ. ಯಾರು ಬೇಕಾದರೂ ಇಂದು ಯೂಟ್ಯೂಬ್ ಚಾನೆಲ್ ಹೊಂದುವುದು ಸಾಧ್ಯವಾಗಿದೆ. ಕೇವಲ ಐದಾರು ನಿಮಿಷಗಳಲ್ಲಿ ನಮ್ಮದೇ ಆದ ಚಾನೆಲನ್ನು ಹೊಂದಬಹುದು. ಪ್ರಪಂಚದಲ್ಲಿ ಇದಕ್ಕಿಂತ ಮಿಗಿಲಾದ ಪ್ರಜಾಸತ್ತಾತ್ಮಕ, ವಿಶಾಲ ವೇದಿಕೆ ಮತ್ತೊಂದು ಇರಲಾರದು. ಯೂಟ್ಯೂಬ್ ಯಶಸ್ಸಿಗೆ ಇದೇ ಕಾರಣ. ಹೀಗಾಗಿ ಯಾರಿಗಾದರೂ ತಾನೂ ಒಂದು ಯೂಟ್ಯೂಬ್ ಚಾನೆಲ್ ಹೊಂದಬೇಕು ಎಂದು ಅನಿಸುವುದು ಸಹಜ. ಇದರ ಪರಿಣಾಮ ಇಂದು ಜನಸಾಮಾನ್ಯರಿಗೂ ಯೂಟ್ಯೂಬ್ ಚಾನೆಲ್ ಆರಂಭಿಸು ವುದು ಸಾಧ್ಯವಾಗಿದೆ. ಜಿ ಮೇಲ್ ಅಕೌಂಟ್, ಒಂದು ಸ್ಮಾರ್ಟ್ ಫೋನ್, ಕಾಲರ್ ಮೈಕ್ ಇದ್ದರೆ ಸಾಕು, ಯಾರು ಬೇಕಾದರೂ ಯೂಟ್ಯೂಬ್ ಚಾನೆಲ್ ಆರಂಭಿಸಬಹುದು.

ಕೇರಳದ ಮೀನುಗಾರನ ಪತ್ನಿಯೊಬ್ಬಳು ಒಂದು ಯೂಟ್ಯೂಬ್ ಚಾನೆಲ್ ಆರಂಭಿಸಿದ್ದಾಳೆ. ಪ್ರತಿ ದಿನ ಬೆಳಗ್ಗೆ ಹತ್ತು ಗಂಟೆಗೆ ಮತ್ತು ಸಾಯಂಕಾಲ ಆರು ಗಂಟೆಗೆ ಆಕೆ ಎರಡು ವಿಡಿಯೋಗಳನ್ನು ಅಪ್ಲೋಡ್ ಮಾಡುತ್ತಾಳೆ. ತನ್ನ ಗಂಡ ಬೆಳಗ್ಗೆ ಮತ್ತು ಸಾಯಂಕಾಲ ಸಮುದ್ರಕ್ಕೆ ಹೋಗಿ ಹಿಡಿದ ಮೀನಿನ ವಿವರಗಳನ್ನು ನೀಡುತ್ತಾಳೆ. ಆಕೆ ವಿಡಿಯೋ ಅಪ್ಲೋಡ್ ಮಾಡುವುದನ್ನು ವೀಕ್ಷಿಸಲು ಸಾವಿರಾರು ಜನ ಕುತೂಹಲದಿಂದ ಕಾದು ಕುಳಿತಿರುತ್ತಾರೆ. ಅವಳ ಯೂಟ್ಯೂಬ್ ವಿಡಿಯೋ ಲಿಂಕ್ ಅನ್ನು ಸಾವಿರಾರು ಮಂದಿ ವಾಟ್ಸಾಪ್ ಮೂಲಕ ಶೇರ್ ಮಾಡುತ್ತಾರೆ. ಅವಳ ಗಂಡ ಹಿಡಿದು ತಂದ ಮೀನುಗಳು ಅರ್ಧ ಗಂಟೆಯಲ್ಲಿ ಖಾಲಿ! ಜನ ಸರತಿ ಸಾಲಿನಲ್ಲಿ ನಿಂತು ಕಚ್ಚಾಡಿ ಖರೀದಿಸುತ್ತಾರೆ. ಆಕೆಯ ಚಾನೆಲ್‌ಗೆ ಲಕ್ಷಾಂತರ ಮಂದಿ ಚಂದಾದಾರರಿದ್ದಾರೆ. ಮೀನು ಖರೀದಿಸದೇ ಇರುವವರೂ, ಕುತೂಹಲಕ್ಕೆ ಅವಳ ಚಾನೆಲ್ ವೀಕ್ಷಿಸುತ್ತಾರೆ. ವಿದೇಶಗಳಲ್ಲಿರುವವರೂ ಆಸಕ್ತಿಯಿಂದ ಅವಳ ಚಾನೆಲನ್ನು ಫಾಲೋ ಮಾಡುತ್ತಾರೆ. ಇವಳು ಪ್ರತಿ ತಿಂಗಳು ಯುಟ್ಯೂಬ್ ಜಾಹೀರಾತಿನಿಂದ ಐವತ್ತು ಸಾವಿರಕ್ಕಿಂತ ಹೆಚ್ಚು ಹಣವನ್ನು ಗಿಟ್ಟಿಸುತ್ತಾಳೆ. ಇವಳಿಂದ ಪ್ರಭಾವಿತರಾದ ಲಕ್ಷಾಂತರ ಮಂದಿ ಸಣ್ಣ ಮತ್ತು ಮಧ್ಯಮ ಪ್ರಮಾಣದ ವ್ಯಾಪಾರಿಗಳು ತಮ್ಮದೇ ಯೂಟ್ಯೂಬ್ ಚಾನೆಲ್ ಆರಂಭಿಸಿದ್ದಾರೆ.

ಇಂದು ಯೂಟ್ಯೂಬ್ ಚಾನೆಲ್ ಆರಂಭಿಸದಿರುವವರೇ ಇಲ್ಲ. ಬೆಳಗಾವಿ ಜಿಲ್ಲೆಯೊಂದರಲ್ಲೇ ಎಂಬತ್ತು ಸಾವಿರ ಮಂದಿ ಯೂಟ್ಯೂಬ್ ಚಾನೆಲ್ ಹೊಂದಿದ್ದಾರಂತೆ. ಈ ಪೈಕಿ ಸುಮಾರು ಆರು ಸಾವಿರ ಮಂದಿ ಗೃಹಿಣಿಯರು. ಯಾವುದೇ ಊರಿಗೆ ಹೋದರೂ, ಅಲ್ಲಿ ಐದಾರು ಪತ್ರಕರ್ತರು ತಮ್ಮದೇ ಚಾನೆಲ್ ಹೊಂದಿರುತ್ತಾರೆ. ನಾನು ಇತ್ತೀಚೆಗೆ ಬೀದರ ಜಿಲ್ಲೆಯ ಭಾಲ್ಕಿಗೆ ಹೋಗಿದ್ದೆ. ಅಷ್ಟೇನೂ ಮುಂದುವರಿಯದ ಆ ತಾಲೂಕಿನಲ್ಲಿ ನಾಲ್ಕು ಸಾವಿರಕ್ಕಿಂತ ಹೆಚ್ಚು ಮಂದಿ ಯೂಟ್ಯೂಬ್ ಚಾನೆಲ್ ಹೊಂದಿದ್ದಾರೆಂದು ನನಗೆ ಅಲ್ಲಿನ ಪತ್ರಕರ್ತರೊಬ್ಬರು ತಿಳಿಸಿದರು. ರೊಟ್ಟಿ ತಟ್ಟಿ ಮನೆಮನೆಗೆ ಸರಬರಾಜು ಮಾಡುವವರು, ತರಕಾರಿ ಬೆಳೆಯುವವರು, ಹಸುಗಳನ್ನು ಸಾಕಿದವರು, ಹಣ್ಣು ಬೆಳೆಗಾರರು, ಬಾಳೆ ಎಲೆ ವ್ಯಾಪಾರಿಗಳು, ಪುರೋಹಿತರು ಸಹ ತಮ್ಮದೇ ಚಾನೆಲ್ ಆರಂಭಿಸಿದ್ದಾರಂತೆ. ಇವರೆಲ್ಲರಿಗೂ ನೂರಾರು ಮಂದಿ ಚಂದಾದಾರರಿದ್ದಾರಂತೆ.

ಬೆಂಗಳೂರಿನಂಥ ಮಹಾನಗರದಲ್ಲಿ ಮನೆಗೆಲಸದವರು, ಟಿವಿ ದುರಸ್ತಿ ಮಾಡುವವರು, ಗಾರ್ಡನರ್‌ಗಳು, ಎಲೆಕ್ಟ್ರಿಷಿಯನ್‌ಗಳು ಕೂಡ ಯೂಟ್ಯೂಬ್ ಚಾನೆಲ್ ಆರಂಭಿಸಿದ್ದಾರೆ. ಇನ್ನು ಕಲಾವಿದರು, ಸಂಗೀತಗಾರರು, ಗಾಯಕರು, ನೃತ್ಯ ಕಲಾವಿದರು, ಬ್ಯುಟಿಷಿಯನ್ಸ್, ಮೆಹಂದಿ ಆರ್ಟಿಸ್ಟ್‌ಗಳು, ಫೋಟೋಗ್ರಾಫರುಗಳು ಸಹ ಹಿಂದೆ ಬಿದ್ದಿಲ್ಲ. ಇವರೆಲ್ಲರೂ ತಮ್ಮ ವಿಸಿಟಿಂಗ್ ಕಾರ್ಡುಗಳಲ್ಲಿ ಯೂಟ್ಯೂಬ್ ಚಾನೆಲ್ ವಿಳಾಸ ನೀಡಿರುತ್ತಾರೆ. ಮೊದಲು ಇಮೇಲ್ ಐಡಿ ನೀಡುವಂತೆ, ಈಗ ಯೂಟ್ಯೂಬ್ ಲಿಂಕ್ ನೀಡುವುದು ಸಾಮಾನ್ಯವಾಗಿದೆ. ಹೊಸದುರ್ಗ ತಾಲೂಕಿನ ಹಳ್ಳಿಯೊಂದರಲ್ಲಿ ದನ ಮತ್ತು ಕುರಿ ಕಾಯುವ ಅವಳಿ ಸಹೋದರರು ಆರಂಭಿಸಿದ ಯೂಟ್ಯೂಬ್ ಚಾನೆಲ್‌ಗೆ ಐವತ್ತು ಸಾವಿರ ಚಂದಾದಾರರಾಗಿದ್ದು, ಅವರು ಹಾಡಿದ ಹಾಡುಗಳು ವೈರಲ್ ಆಗಿದ್ದನ್ನು ಕನ್ನಡದ ಟಿವಿ ಚಾನೆಲ್ ಗಳು ಮತ್ತು ಪತ್ರಿಕೆಗಳು ವ್ಯಾಪಕವಾಗಿ ವರದಿ ಮಾಡಿದ್ದನ್ನು ನೆನಪಿಸಿಕೊಳ್ಳಬಹುದು.

ಈಗ ಹೇಳುತ್ತೇನೆ, ನಾನು ಈ ಎಲ್ಲ ಕಾರಣಗಳಿಗಾಗಿಯೇ ಯೂಟ್ಯೂಬ್ ಚಾನೆಲ್ ಮಾಡಿಲ್ಲ. ಎಲ್ಲಿ ಹೊಸತನಕ್ಕೆ ಸಾಧ್ಯವಾಗುವುದಿಲ್ಲವೋ, ಎಲ್ಲಿ ಹೊಸ ಹೊಸ ಪ್ರಯೋಗಗಳಿಗೆ ಆಸ್ಪದ ಇರುವುದಿಲ್ಲವೋ ಅಲ್ಲಿ ನಾನಿರುವುದಿಲ್ಲ. ಇಂದು ಯೂಟ್ಯೂಬ್ ನಲ್ಲಿ ಹೊಸ ಪ್ರಯೋಗ ಮಾಡಲು ಏನೂ ಉಳಿದಿಲ್ಲ. ಏನೇ ಮಾಡಿದರೂ ಅದು ಬೇರೆಯವರು ಮಾಡಿದ್ದನ್ನೇ ಮಾಡಬೇಕು. ಅಂದರೆ ಒಂದು ರೀತಿಯಲ್ಲಿ ಕಾಪಿ ಮಾಡಬೇಕು, ನಕಲು ಹೊಡೆಯಬೇಕು. ಏನೇ ಮಾಡಿದರೂ ಅದನ್ನು ಯಾರೋ ಮಾಡಿ ಮುಗಿಸಿದ್ದೇ ಆಗಿರುತ್ತದೆ. ಹಾಗೆಂದು ಎಲ್ಲರೂ ನಿಂತು ಮಾತಾಡಿದ್ದಾರೆಂದು, ನಾವು ತಲೆಕೆಳಗಾಗಿ ಮಾತಾಡಲು ಆಗುವುದಿಲ್ಲ. ಹೊಸತನದ ಹೊರತಾಗಿಯೂ, ಬೇರೆ ವಿಷಯಗಳನ್ನು ಹೇಳಲು ಆಗದಷ್ಟು ಮಾಹಿತಿದಟ್ಟಣೆ ಆಗಿಬಿಟ್ಟಿದೆ. ಕೇಳುವವರಿಗಿಂತ ಹೇಳುವವರೇ ಜಾಸ್ತಿಯಾಗಿಬಿಟ್ಟಿದ್ದಾರೆ. ಯಾರಿಗೂ ಕೇಳಲು, ಓದಲು ಪುರುಸೊತ್ತಿಲ್ಲ. ಎಲ್ಲರಿಗೂ ಹೇಳುವ ತರಾತುರಿ. ಒಮ್ಮೆ ನೀವು ಹೇಳುವ ತವಕಕ್ಕೆ ಸಿಲುಕಿದರೆ, ಮಾತು ಹಲುಬಾಟವಾಗುತ್ತದೆ. ಆಗ ಅಂಥ ಮಾತು ಶುಷ್ಕ ಮತ್ತು ಗದ್ದಲವಾಗುತ್ತದೆ.

ಇಂದು ನಾವು ಈ ಗದ್ದಲದ ಕರ್ಕಶ ಸಂತೆಯಲ್ಲಿ ಬದುಕುತ್ತಿದ್ದೇವೆ. ಹತ್ತು ಜನ ಸೇರಿರುವ ವೇದಿಕೆಯಲ್ಲಿ, ಕೊನೆಯಲ್ಲಿ ಒಬ್ಬರ ಮಾತುಗಳನ್ನು ಕೇಳಲು, ಎಲ್ಲರ ಮಾತುಗಳನ್ನು ಕೇಳುವ ಕರ್ಮದಂತಾಗಿದೆ ನಮ್ಮ ಪಾಡು. ಒಂದೆರಡು ಒಳ್ಳೆಯ ಚಾನೆಲ್ ಗಳಿಗಾಗಿ ಅರಸಿಕೊಂಡು ಹೋಗುವ ಭರದಲ್ಲಿ, ಉಳಿದ ಚಾನೆಲ್ ಬಳ್ಳಿಗಳು ಕಾಲಿಗೆ ಸುತ್ತಿಕೊಂಡು ತಡಸಿ, ಮುಗ್ಗರಿಸಿ ಬೀಳುವಂತಾಗಿದೆ. ಈ ಚಾನೆಲ್ ಗೊಂಡಾರಣ್ಯದಲ್ಲಿ ಬರೀ ಮಾತುಗಳೇ, ಸದ್ದು-ಸಪ್ಪಳಗಳೇ.

ಈ ಗದ್ದಲದಿಂದಾಗಿ ಒಳ್ಳೆಯ ಕಾರ್ಯಕ್ರಮಗಳನ್ನು ಸವಿಯಲು ಸಾಧ್ಯವಾಗದಂಥ ಸ್ಥಿತಿ. ಮಾತು ಯಾವತ್ತೂ ವಾಚ್ಯವಾಗಬಾರದು. ಎರಡು ವಾಕ್ಯಗಳ ನಡುವಿನ ಸಂದಿಯಷ್ಟೇ ಮೌನವಾಗಬಾರದು. ಈ ಕಾರಣಕ್ಕೆ ಮಾತಿಗಿಂತ ಓದು, ಅಧ್ಯಯನ ಮತ್ತು ಬರಹ ಆಪ್ತವಾಗು ತ್ತದೆ. ಬರಹ ಮತ್ತು ಓದು ಯಾವತ್ತೂ ಏಕಾಂತದಲ್ಲಿ ಹುಟ್ಟಿ, ಏಕಾಂತದಲ್ಲಿಯೇ ಮುಂದಕ್ಕೆ ವರ್ಗವಾಗುವಂಥವು. ಓದು ಯಾವತ್ತೂ ನಮ್ಮೊಳಗೊಂದು ಮೌನವನ್ನು ಸೃಷ್ಟಿಸುತ್ತದೆ. ಮೌನ ಮತ್ತು ಶಾಂತಿಯಲ್ಲಿ ಯಾವತ್ತೂ ಸಂಯಮ, ಸಾವಧಾನ ಮತ್ತು ಸಮತೋಲನವಿದೆ. ಓದು-ಬರಹ ಯಾವತ್ತೂ ಅಧ್ಯಾತ್ಮ ಅನುಭೂತಿಗೆ ಸಮಾನವಾದುದು. ಓದು ಕೊಡುವಷ್ಟು ಸಮಾಧಾನವನ್ನು ಮಾತು ಕೊಡಲು ಸಾಧ್ಯವಿಲ್ಲ, ಮಾತಿನಲ್ಲಿ ಮೌನವಿರುವುದಿಲ್ಲ. ಆದರೆ ಮೌನದ ಬದುವಿನಲ್ಲೇ ಓದು ಮತ್ತು ಬರಹ ಸಾಗುತ್ತದೆ ಮತ್ತು ಗಟ್ಟಿಯಾಗುತ್ತದೆ. Mind can hear a song sung by heart when no sound is heard by the ears. ಎಂಬ ಮಾತಿದೆ. ಯಾವನೋ ಕವಿ ಕೇಳಿದ ಮಾತುಗಳು ಮನನೀಯ & The silence of the forest is different; the silence of the desert is different; the silence of the cave is different! Silences in different places are not the same silences because silence is not only the absence of the sounds but also it is the presence of different feelings in the absence of the sounds! ಹೀಗಾಗಿ ಅಕ್ಷರಗಳ ಮುಂದೆ ಮಾತು ಶರಣಾಗಲೇಬೇಕು. ಒಂದು ಕ್ಷಣ ಊಹಿಸಿ, ಯೂಟ್ಯೂಬ್ ಚಾನೆಲ್ ಗಳಲ್ಲಿರುವ ಮಾತುಗಳೆಲ್ಲಾ ಹೊರ ಬಂದರೆ ಹೇಗಾಗಬಹುದು?

ಮಾತಾಡುವವರು ಮಾತಾಡಲಿ, ಆಪ್ತವಾಗಿದ್ದರೆ ಕೇಳೋಣ. ಆದರೆ ಅಕ್ಷರಗಳ ಸಾಂಗತ್ಯ ವರ್ಣಿಸಲಸಾಧ್ಯ. ಅದು ಸಾಕ್ಷಾತ್ಕಾರಕ್ಕೆ ಮುಖ ಮಾಡಿದಂತೆ. ಓದು ನಮ್ಮೊಳಗಿನ ಆಳಕ್ಕೆ ಇಳಿಯುತ್ತಾ ಹೋಗಿ ತುಂಬಿಕೊಂಡಂತೆ. ಅದೇ ಮಾತು ನಮ್ಮನ್ನು ಬರಿದು ಮಾಡಿಕೊಂಡಂತೆ. ಹೀಗಾಗಿ ನನಗೆ ಅದು ಒಗ್ಗುವಂಥದ್ದಲ್ಲ, ಈ ಜಗತ್ತು ಮಾತಾಡುವವರ ಪರವಾಗಿದ್ದರೂ ಪರವಾಗಿಲ್ಲ, ನಾನಂತೂ ಓದುವವರ ಮೈನಾರಿಟಿ ಗುಂಪಿಗೆ ಸೇರುತ್ತೇನೆ. ನಮ್ಮ ಬರಹ ಇಡೀ ಜಗತ್ತನ್ನೇ ಆವರಿಸಬೇಕಿಲ್ಲ, ಅದು ಯಾರನ್ನು ಸೇರಬೇಕೋ ಅವರನ್ನು ಸೇರಿದರೆ ಸಾಕು, ಪ್ರೇಯಸಿಯೊಬ್ಬಳನ್ನೇ ತಲುಪುವ ಪ್ರೇಮ ಪತ್ರದಂತೆ.

ಎಲ್ಲಾ ಗೊತ್ತಿರುವ 'ಭಲೇಹುಚ್ಚ' ಮಾಸ್ತರ್

ಅವರಿಗೆ ಒಮ್ಮೆ ಕಾಲು ಮುರಿದು ಆರು ತಿಂಗಳು ಹಾಸಿಗೆ ಹಿಡಿದರು ಎನ್ನುವದಕ್ಕಿಂತ ಹಾಸಿಗೆ ಹಿಡಿಯದೇ ಹಾಸಿಗೆ ಮೇಲೆ ಕೂತು ಮನೆಯ ಮುಂದೆ ಹಾದು ಹೋಗುವವರನ್ನೆಲ್ಲ ಮಾತಿಗೆ ಎಳೆಯುತ್ತಿದ್ದರು, ಅದು ಜನರ ಪಾಲಿಗೆ ಇನ್ನೂ ಘೋರ ಯಾತನೆಯಾಯಿತು.

ಪ್ರಾಣೇಶ್ ಪ್ರಪಂಚ

ಗಂಗಾವತಿ ಪ್ರಾಣೇಶ್

vveditoped@gmail.com

'ನನಗೆ ಎಲ್ಲವೂ ಗೊತ್ತು, ನನಗೆ ಎಲ್ಲರೂ ಗೊತ್ತು, ಅವ ನನ್ನ ಸ್ಟೂಡೆಂಟು' ಈ ವಾಕ್ಯವನ್ನು ನಮ್ಮೂರಿನ ಒಬ್ಬ ನಿವೃತ್ತ ಶಿಕ್ಷಕರು, ಕರ್ನಾಟಕದ ಮೂರು ಕೋಟಿ (ಈ ಘಟನೆಗಳು ನಡೆದ ಕಾಲಕ್ಕೆ ಅಂದರೆ 1980-81 ರ ದಶದಲ್ಲಿ 3 ಕೋಟಿ ಇತ್ತು) ಜನರ ಬಗ್ಗೆ, ನಡೆದ ವಿದ್ಯಮಾನಗಳ ಬಗ್ಗೆ ಯಾರು ಮಾತಾಡಿಸಿದರೂ, ಯಾರು, ಯಾರ ಬಗ್ಗೆ ಕೇಳಿದರೂ ಅವರ ಬಗ್ಗೆ ಮೇಲಿನ ವಾಕ್ಯ ಹೇಳಿ, 'ಗೊತ್ತದ ಏಳೋ, ಮುಂದಿನದು ಹೇಳು, ಅವ ನನ್ನ ಭೆಟ್ಟಿಗೆ ಬರದ ಭಾಳ ದಿನ ಆತು, ಸಿಕ್ಕಾಂದ್ರ, ನಾ ಕರೆದೆ, ಕೇಳಿದೆ ಅಂತ ಹೇಳು, ನನ್ನ ಹೆಸರ ಕೇಳಿದರ ಅವ ಕ್ಕಿ ಹಾಕ್ತಾನ, ಹೇತುಗೋತ ಓಡಿ ಬರ್ತಾನ' ಎಂದು ಅಂದೇ ತೀರುತ್ತಿದ್ದರು..

ಲಿಂಗಸಗೂರು, ರಾಯಚೂರು ಜಿಲ್ಲೆಯ ಕುಗ್ರಾಮಗಳ ಏಕೋಪಾಧ್ಯಾಯ ಶಾಲೆಗಳಲ್ಲೇ ತಮ್ಮ ಮೂವತ್ತೈದು ವರ್ಷ ಶಾಲಾ ಮಾಸ್ತರಿಕೆ ಮಾಡಿ, ವಿದ್ಯಾರ್ಥಿಗಳಿಗೆ ಗದರಿಸಿ,ಜಬರಿಸಿ, ಅಂಗಡಿಯಿಂದ ಎಲಿ, ಅಡಿಕಿ, ದೆಹಲಿ ಜರ್ದಾ ತರಿಸಿಕೊಂಡು ಸದಾ ಅದನ್ನು ಮೆಲ್ಲುತ್ತಲೇ ಹುಡುಗರಿಗೆ ಅದೇನು ಪಾಠ ಹೇಳುತ್ತಿದ್ದರೋ ಗೊತ್ತಿಲ್ಲ, ಇಂಗ್ಲಿಷ್ ಬಗ್ಗೆ ಕೇಳಿದರೆ, 'ನಾ ಗಣಿತ, ಹೇಳಿನೋ ಎನ್ನುತ್ತಿದ್ದರು, ಗಣಿತದ ಬಗ್ಗೆ ಕೇಳಿದರೆ, 'ನಾ ಇಂಗ್ಲೀಷ್ ಟೀಚರ್ ಇದ್ದೆನೋ' ಅನ್ನುತ್ತಿದ್ದರು, ಯಾರಾದರೂ ರಾಜಕೀಯದ ಬಗ್ಗೆ ಹೇಳಿದರೆ 'ಪಾಲಿಟಿಕಲ್ ಸೈನ್ಸ್ ಪಾಠ ಹೇಳಿದವ ನಾನು, ನನಗ ಹೇಳ್ತಿಯೇನು? ಎನ್ನುತ್ತಿದ್ದರು. ಯಾರಾದರೂ ಕಾನೂನು, ಕಾಯಿದೆ ಮಾತಾಡಿದರೆ, ನಮ್ಮ ಹೊಲದ ಕೇಸ್‌ನ್ಯಾಗ ಯಾವ ವಕೀಲನನ್ನು ಇಟ್ಟುಕೊಳ್ಳದೆ, ಕೋರ್ಟ್‌ನ್ಯಾಗ ಜಡ್ಜ್ ಜರ್ಜರಿತ ಆಗುವಹಂಗ ಮಾತಾಡಿದವ ನಾನು, ಎಲ್.ಎಲ್.ಬಿ. ಏನು ಕರೀಕೋಟು ಹಾಕ್ಕೊಂಡು ಮೆರಿಲಿಕ್ಕೇ ಅಂತ ತಿಳಿದಿಯೇನು. ಕನ್ಯಾ ಸಿಗಲಿ ಅಂತ ವಕೀಲ ಆದಾವ ಅಲ್ಲ ನಾನು ಅನ್ನುತ್ತಿದ್ದರು ನಾ ವಾದ ಮಾಡ್ತಿದ್ದರ ಜಡ್ಜ್, ಜಡ್ಜಮೆಂಟ ಬರಿಯೋದು ಮರತು, ಗಾಬ್ರಿಯಾಗಿ ಕೂಡ್ತಿದ್ದ, ಆಮ್ಯಾಲೆ ತಡಬಡಾಯಿಸಿಕೊಂಡು ಕೂತು ' ಕೋರ್ಟ್ ಇಸ್ ಅಡ್ಜರ್ನ್' ಅಂತ ಬರೆದು ಓಡ್ತಿದ್ದ ಯಾಕಂದ್ರ ಲಾ ಕಾಲೇಜನ್ಯಾಗ ಅವನೂ ನನ್ನ ಸ್ಟೂಡೆಂಟ್ ನನ್ನ ಕೈಯಾಗ ಲಾ ಕಲ್ತಾವ, ನನ್ನಗ ಜಡ್ಜಮೆಂಟ್ ಕೊಡ್ತಾನ? ಎಂದು ನಗುತ್ತಿದ್ದರು. ಹೀಗೆ ಎಲ್ಲವನ್ನ ಓದಿದ್ದೇನೆ ಎನ್ನುತ್ತಿದ್ದ ಇವರು ಏನು ಓದಿದ್ದರೆಂಬುದು ಕೊನೆವರೆಗೆ ರಹಸ್ಯವಾಗಿ ಉಳಿತು.

ಇವೆಲ್ಲ ಹಾಳಾಗಲಿ ರೋಗ, ರುಜಿನ, ಕಾಯಿಲೆ, ಕಸಾಲೆ ಬಗ್ಗೆ ಹೇಳಿದರೆ, ಎಂ.ಬಿ.ಬಿಎಸ್. ಮಾಡೀನಿ ಅಂತೀರ್ಲಿಲ್ಲ ಆಯುರ್ವೇದ, ಹೋಮಿಯೋ ಪತಿ ಔಷಧಿ ಬಗ್ಗೆ ಶುರು ಹಚ್ಚಿಕೊಳ್ಳುತ್ತಿದ್ದರು. ಕಾಲು ಉಳುಕಿ ನಡೆಯಲು ಬಾರದೇ ಕಾಲು ಬಾತುಕೊಂಡು ರೋಗಿ ಹಾಸಿಗೆ ಮೇಲೆ ಕೂತು ಪೇಚಾಡುತ್ತಿದ್ದರೆ ಅವನಿಗೆ ಇವರು ಹೇಳುತ್ತಿದ್ದ ಔಷಧಿ ಇಲ್ನೋಡು ಮುಂಜಾನೆ ನಸುಗಿನಾಗ ಎದ್ದು ಯಾರಿಗೂ ಹೇಳದಂಗ, ಒಟ್ಟ ಮಾತಾಡಲಾರದಂಗ, ಕಾಲೇಜು ಹಿಂದಿನ ಗುಡ್ಡ ಏರು ಅಲ್ಲಿ ದೊಡ್ಡ ನಾಗಪ್ಪನ ಬಂಡೆ ಸುತ್ತ ಕೆಂಪು ಕಾಯಿ ಇರೋ ಒಂದು ಹಸಿರುಗಿಡ ಅದ, ಅದರ ತಪ್ಪಲ ಹರದು, ಕಾಲಿಗೆ ಭೇಷ ಗಸಗಸ ತಿಕ್ಕಿಕೋ ಹಿಂಗ ಮೂರು ದಿನ ಮಾಡು, ನೋಡು ನಿನ್ನ ಕಾಲು ಉಳುಕು, ಬಾವು ಎಲ್ಲ ಮಾಯ ಆಗ್ತದ ಅಂತಿದ್ದರು, ಕಾಲುಬಾತು ಅವನೋ ಮಲ-ಮೂತ್ರಗಳಿಗೇ ಇನ್ನೊಬ್ಬರನ್ನು ಕಾಯುತ್ತಿರು ವವನಿಗೆ ಒಬ್ಬನೇ ಗುಡ್ಡ ಏರಿ ಅಲ್ಲಿ ತಪ್ಪಲಾ ಹುಡುಕಿ ತಿಕ್ಕನ್ನುತ್ತಿದ್ದ ಇವರನ್ನು ಊರವರು ತಿಕ್ಕಲು ನನ್ನ ಮಗ ಎಂದೇ ಕರೆಯುತ್ತಿದ್ದರು. ಕಾಲು ನೋವಿನ ಅವನು ಅಲ್ರಿ ಮಾಸ್ತರ್ರ, ಎದ್ದು ನಿಂದರಾಕ ಬರವಲ್ದು ಅಂಥಾದ್ರಾಗ ನೀವು ನನ್ನ ಗುಡ್ಡ ಏರು ಅಂತಿರಲ್ರಿ, ಎಂದರೆ ಎಲಾ ನಿನ್ನ, ಎದ್ದು ಓಡಾಡಲಾರದೆ ಕೂತಲ್ಲೇ ಕಾಲು ಬ್ಯಾನಿ ಕಮ್ಮಿ ಆಗ್ಲಿ ಎಂದರ ಹೆಂಗೋ? ಎಂದು, 'ಇಂಥ ಅಧಿಕ ಪ್ರಸಂಗಿ ಪ್ರಶ್ನೆ ಕೇಳಿದ್ರ, ನಾ ಏನು ಉತ್ತರ ಹೇಳಲಿ, ಸಾಯಿ ಹೋಗು, ನನ್ನ ಯಾಕ ಕೇಳಿದಿ ಹಂಗಾದ್ರ ಎಂದು ಎದ್ದು ಹೋಗುತ್ತಿದ್ದರು.

ಇವರಿಗೇ ಒಮ್ಮೆ ಕಾಲು ಮುರಿದು ಆರು ತಿಂಗಳು ಹಾಸಿಗೆ ಮೇಲೆ ಕೂತು ಮನೆಯ ಮುಂದೆ ಹಾದು ಹೋಗುವವರನ್ನೆಲ್ಲ ಮಾತಿಗೆ ಎಳೆಯುತ್ತಿದ್ದರು, ಅದು ಜನರ ಪಾಲಿಗೆ ಇನ್ನೂ ಘೋರ ಯಾತನೆಯಾಯಿತು. ಇವರಿಗೆ ಕಾಲು ಮುರಿದದ್ದಾದರೂ ಹೇಗೆ ಎಂದರೆ, ಇವರು ಊರಲ್ಲಿ ಎಲ್ಲರಿಗೂ ಪರಿಚಿತರು, ಎಲ್ಲರನ್ನು ಅವರು ಅಲ್ಲವೆಂದು ಆಣೆ ಮಾಡಿ ಹೇಳಿದರೂ 'ನೀನು ನನ್ನ ಸ್ಟೂಡೆಂಟ್ ಇದ್ದಿಯೋ ನಿನ್ನ ಗಾಡಿ ಮೇಲೆ ನನ್ನ ಆ ಬ್ಯಾಂಕಿನ ತನಕ ಬಿಡು, ಪೆನಶನ್ ತರಬೇಕು' ಎಂದು ಅವನ ಗಾಡಿ ಏರಿ ಬಿಡುತ್ತಿದ್ದರು. ಇದು ಅವರ ಡ್ರಾಪ್ ಕೇಳುವ ಒಂದು ವಿಧಾನವೂ ಆಗಿತ್ತು.

ಇನ್ನು ಡ್ರಾಪ್ ಕೇಳಿ ಹತ್ತಿದ ಗಾಡಿಯಿಂದ ತಾವು ಹೇಳಿದ ಸ್ಥಳದಲ್ಲಿ ಇಳಿಸಿದಾಗ ಸುಮ್ಮನೆ ಇಳಿಯುತ್ತಿದ್ದರೇನು? ಊಹೂ! ಏನು ಗಾಡಿ ಇಟ್ಟಿಯಲೆ ಮಂಗ್ಯಾ, ಧಡಕಾಭಡಕಾ ಗಾಡಿ, ಛಲೋ ಗಾಡಿ ತಗೋ ಒಂದು, ಕೂಡುವವರ ಮೈ ಮುಗ್ಗಲು ಮಾಡ್ತಿ ಆತು ಎಂದೇ ಇಳಿಯುತ್ತಿದ್ದರು. ಹೀಗೆ ಒಂದು ಗಾಡಿ ಮೇಲೆ ಕೂತು ಬರುತ್ತಿರುವಾಗ ನಮ್ಮೂರ ಮಧ್ಯದಲ್ಲಿ ಹರಿಯುತ್ತಿರುವ ದುರ್ಗಮ್ಮನ ಹಳ್ಳದ ಮೇಲಿನ ಸೇತುವೆ ಮೇಲೆ ಗಾಡಿ ಬರುವಾಗ ಗೌಳಿಗೇರ ಎಮ್ಮೆಯ ಹಿಂಡೊಂದು ಎದುರಿಗೆ ಬಂತು, ಗಾಡಿ ಹೊಡೆಯುವವ ಅವುಗಳ ಮಧ್ಯೆಯೇ ದಾರಿಮಾಡಿಕೊಂಡು ಗಾಡಿ ನುಗ್ಗಿಸಿದಾಗ ಇವರು ಸುಮ್ಮನೆ ಕೂರದೇ, ತಮ್ಮ ಕೈಯಲ್ಲಿದ್ದ ಒನಕೆ ಆಕಾರವುಳ್ಳ ವಾಕಿಂಗ್ ಸ್ಟಿಕ್‌ನಿಂದ ಒಂದು ಎಮ್ಮೆಯನ್ನು ತಿವಿದು ಬಿಟ್ಟರು. ಗಾಡಿ ಹೊಡೆಯುವವನ ಬ್ಯಾಲನ್ಸ್ ಔಟ್ ಆಗಿ, ಹ್ಯಾಂಡಲ್ ಶೇಕ್ ಆಗಿ, ಅವನು ಹೊಯ್ದಾಡುವಾಗ ಆ ಎಮ್ಮೆಯನ್ನು ಬಲಗಾಲಿನಿಂದ ಒದ್ದೂ ಬಿಟ್ಟರು ಅಷ್ಟೆ. ಗಾಡಿ ಸಮೇತ ಇಬ್ಬರೂ ಪಕ್ಕದ ಹಳ್ಳಕ್ಕೇ ಬಿದ್ದು, ಹಿಂದೆ ಕೂತ ಇವರ ಕಾಲು ಮುರಿದೇ ಹೋಯಿತು, ಆರು ತಿಂಗಳು ಮನೆ ಹಿಡಿದ ವಾಚಾಳಿ ಮಾಸ್ತರ್ರು, ಎಮ್ಮೆ ಸಾಕಣೆ, ಎಮ್ಮೆ ಕಾಯ ುವವ ಹೇಗಿರಬೇಕು, ನಾನು ಎಮ್ಮೆ ಕಟ್ಟಿ, ಎಮ್ಮೆ ಕಾಯ್ದು, ಹಾಲು ಹಿಂಡಿ ಡೈರಿ ನಡೆಸೇನಿ ಎಂಬ ಟಾಪಿಕ್ ಮೇಲೆ ಆರು ತಿಂಗಳು ಕಣ್ಣಿಗೆ ಕಂಡವರನ್ನೆಲ್ಲ ಬೈದರು. ಸದ್ಯ ಮುಂದಿನ ಜನ್ಮದಲ್ಲಿ ಕೋಣನಾಗಿ ಹುಟ್ಟಿ ಎಮ್ಮೆಗಳ ಮೇಲೆ ಸೇಡು ತೀರಿಸಿಕೊಳ್ಳುತ್ತೇನೆ ಎನ್ನಲಿಲ್ಲ.

ರಾಯಚೂರು, ಲಿಂಗಸಗೂರು ಬಿಟ್ಟರೆ ಇನ್ನೊಂದು ಊರು ನೋಡದ ಈ ಮಾಸ್ತರ್ರು, ತಮ್ಮ ವಯಸ್ಸಿನಲ್ಲಿ ಒಮ್ಮೆ ಮಾತ್ರ ಬೆಂಗಳೂರು ನೋಡಿದ್ದರು, ಅದೂ ಆಟೋದಲ್ಲಿ ಕೂತುಕೊಂಡೇ ಬಗ್ಗಿ ಬಗ್ಗಿ ನೋಡಿದ್ದಷ್ಟೆ, ಅಷ್ಟರ ಮೇಲೇ ಬೆಂಗಳೂರಿನ ಗಲ್ಲಿ ಗಲ್ಲಿ ನೋಡಿನೋ ಎಂದೇ ಹೇಳುತ್ತಿದ್ದರು. ಅದು 1972ನೇ ಇಸ್ವಿ ಬೆಂಗಳೂರಲ್ಲಿ ರಾಜಕುಮಾರರ 'ಭಲೇ ಹುಚ್ಚ ಬಿಡುಗಡೆ ಆಗಿತ್ತು. ಆ ಸಿನಿಮಾನೂ ನೋಡಿ ಬಂದಿದ್ದರು, ಅದರ ಕಥೆಯನ್ನೂ ಬಂದವರಿಗೆಲ್ಲ ಹೇಳಲಾರಂಭಿಸಿದ್ದರಿಂದ, ಊರ ಜನರು ಬೆಂಗಳೂರಿಗೆ ಹೋಗಿ ಬಂದ ಭಲೇ ಹುಚ್ಚ ಮಾಸ್ತರ ಎಂದೇ ಇವರಿಗೆ ಹೊಸ ನಾಮಕರಣ ಮಾಡಿದ್ದರು. ಈಗ ಮಾಸ್ತರಿಕೆಗೆ ಒಂದು ಗತ್ತು ಗಾಂಭೀರ್ಯ ಬಂದಿದೆ. ಮಾಸ್ತರ್‌ರಿಗಿಂತ ಮಕ್ಕಳು, ಮಕ್ಕಳ ಪಾಲಕರು ಬುದ್ಧಿ ವಂತರಾಗಿರುವದರಿಂದ , ಬೆರಳ ತುದಿಯಲ್ಲೆ ಜಗತ್ತಿನ ವಿದ್ಯ ಮಾನಗಳನ್ನು ತಿಳಿಸುವ ತಂತ್ರಜ್ಞಾನ ಬಂದಿರುವಾಗ, ಇಂಥ ಮಾಸ್ತರುಗಳು ಈಗಿಲ್ಲ 'ಸ್ಟೇಷನ್ ಮಾಸ್ತರಗ ನಿದ್ದಿ ಇಲ್ಲ, ಸಾಲಿ ಮಾಸ್ತರಗ ಬುದ್ಧಿ ಇಲ್ಲ. ಎಂಬುದು ನಾಣ್ಣುಡಿಯೇ ಆಗಿ ಹೋಗಿತ್ತು ಆಗ. ಈಗ ಈ ಇಬ್ಬರೂ, ಅವಿಷ್ಕಾರ ಗೊಂಡಿರುವ ಯಂತ್ರ ತಂತ್ರಜ್ಞಾನದಿಂದಾಗಿ ಈ ಅಪವಾದಗಳಿಂದ ಹೊರ ಬಂದಿದ್ದಾರೆ. ಆದರೆ ಇಂಥ ರಂಜನೀಯ ವ್ಯಕ್ತಿಗಳ ನಡೆ ನುಡಿ ಗಳಿಂದ ನಾವುಗಳು ಪಡೆಯುತ್ತಿದ್ದ ಮನೋಆಹ್ಲಾದಗಳಿಂದ ವಂಚಿತರಾಗಿದ್ದಾರೆ. ಬೆರಳ ತುದಿಯಲ್ಲೇ ಎಲ್ಲವೂ ಸಿಕ್ಕಿದೆ ಎಂದು ಹೆಮ್ಮೆ ಪಡುತ್ತಿರುವ ಈ ಹೊತ್ತಿನಲ್ಲೇ ಸಣ್ಣ ಸಣ್ಣ ಸುಖಗಳು ಕೈ ತಪ್ಪಿಯೇ ಹೋಗಿರುವದು ನಮ್ಮ ಗಮನಕ್ಕೆ ಬರುತ್ತಲೇ ಇಲ್ಲ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ವಿದ್ಯಾರ್ಥಿಗಳ ಭವಿಷ್ಯದ ಜತೆ ಚೆಲ್ಲಾಟವೇಕೆ?

ರಾಷ್ಟ್ರೀಯ ಶಿಕ್ಷಣ ನೀತಿಯನ್ನು ದೇಶದಲ್ಲಿ ಕಾರ್ಯಾನುಷ್ಠಾನಗೊಳಿಸುವ ಚಿಂತನೆಗಳು ಪ್ರಗತಿಯಲ್ಲಿರುವಾಗಲೇ ಕರ್ನಾಟಕದಲ್ಲಿ ಪದವಿ ಹಂತದಲ್ಲಿ ಜಾರಿಗೊಳಿಸಲಾಗಿರುವುದು ಸರ್ವವಿದಿತ. ಆದರೆ ಅನುಷ್ಠಾನದಲ್ಲಿ ಇರುವ ಗೊಂದಲ ಹಾಗೇ ಮುಂದುವರಿದಿದ್ದು, ಅದರಲ್ಲೂ ಭಾಷೆಯ ವಿಚಾರದಲ್ಲಿ ಸರಕಾರ ಮೊಂಡುತನ ಮಾಡುತ್ತಿರುವುದು ಅತ್ಯಂತ ಖೇದಕರ. ಯಾವುದೇ ಭಾಷೆಯನ್ನು ಕಡ್ಡಾಯಗೊಳಿಸದೇ ಎಲ್ಲ ವಿದ್ಯಾರ್ಥಿಗಳು ಅವರ ಆಯ್ಕೆಯ ಭಾಷೆಯ ಅಧ್ಯಯನಕ್ಕೆ ಅವಕಾಶ ನೀಡಬೇಕೆಂದು ಕೋರಿದರೂ ಅನಾದರ ಮಾಡುತ್ತಿರುವುದು ದುರಂತ. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ವಾದ ಮಾಡುವಾಗ ತನ್ನ ನೀತಿಯಲ್ಲಿ ನ್ಯಾಯಾಂಗಗಳು ಮಧ್ಯ ಪ್ರವೇಶ ಮಾಡಬಾರದೆಂದು ಹೇಳಲಾಗಿದೆ. ಸರಕಾರದ ನೀತಿಗಳಿಂದ ಸಮಾಜಕ್ಕೆ ತೊಂದರೆಯಾದಾಗ ನ್ಯಾಯಾಲಯದಲ್ಲಿ ಪ್ರಶ್ನಿಸಿದೇ ಇನ್ನೆಲ್ಲಿ ಹೋಗಬೇಕು? ಸರಕಾರದ ಭಾಷಾ ನೀತಿಯಿಂದ ಸಾವಿರಾರು ಅಲ್ಪಸಂಖ್ಯಾತ ಭಾಷಾ ಶಿಕ್ಷಕರು ತಮ್ಮ ಜೀವನದ ಆಧಾರವನ್ನು, ಅನ್ನವನ್ನು ಕಳೆದುಕೊಳ್ಳುವುದು ಅನ್ಯಾಯವಲ್ಲವೇ? ಇನ್ನು ವಿದ್ಯಾರ್ಥಿಯ ಆಯ್ಕೆಗೆ ಮುಕ್ತ ಅವಕಾಶ ಎನ್‌ಇಪಿಯಲ್ಲಿ ಇರುವಾಗ ಅವರನ್ನು ಕಟ್ಟಿ ಹಾಕುವುದು ಎಷ್ಟು ಸರಿ? ವಿದ್ಯಾರ್ಥಿಗಳನ್ನು ಆತಂಕದಲ್ಲಿ ಇಟ್ಟು, ಅವರ ಮೇಲೆ ಪ್ರಯೋಗ ಮಾಡುತ್ತ ಬಲಿಪಶು ಮಾಡುತ್ತಿರುವುದು ಸರಿಯಲ್ಲ. ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಚೆಲ್ಲಾಟವೇಕೆ?. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಭಾವನೆಗಳಿಗೆ ಬೆಲೆ ನೀಡದೇ ಹಠಮಾರಿ ಧೋರಣೆ ತೋರುತ್ತಿರುವುದು ಅತ್ಯಂತ ನಿರಾಶದಾಯಕ. ಜನರ ನಾಡಿ ಮಿಡಿತ ಅರ್ಥಮಾಡಿಕೊಳ್ಳದೇ ದರ್ಪ ಮೆರೆಯುತ್ತಿರುವುದು ಮುಂದಿನ ದಿನಗಳಲ್ಲಿ ದುಷ್ಪರಿಣಾಮಗಳಿಗೆ ಆಹ್ವಾನ ಮಾಡಿದಂತೆ.

ಮಾನ್ಯ ಪ್ರಧಾನಿಗಳ ಆಶೋತ್ತರಗಳಿಗೆ ತಿಲಾಂಜಲಿ ನೀಡದೇ, ಎನ್‌ಇಪಿ ದುರ್ಬಲಗೊಳಿಸದೇ, ಯಾವುದೋ ಒಂದು ಭಾಷೆಯನ್ನು ಕಡ್ಡಾಯಗೊಳಿಸದೇ ಅತಿ ಶೀಘ್ರದಲ್ಲಿ ವಿದ್ಯಾರ್ಥಿಯ ಆಯ್ಕೆಯ ಭಾಷೆಗಳ ಅಧ್ಯಯನಕ್ಕೆ ಮುಕ್ತ ಅವಕಾಶ ನೀಡಿ. ಗೊಂದಲ ಪರಿಹರಿಸಿ. ಬಕಪಕ್ಷಿಗಳಂತೆ ಕಾಯುತ್ತಿರುವ ವಿದ್ಯಾರ್ಥಿಗಳ ಮನಸ್ಸನ್ನು ಘಾಸಿಗೊಳಿಸದೇ, ವಿದ್ಯಾರ್ಥಿ ಶಕ್ತಿಯನ್ನುಅರಿತು ನಡೆಯಿರಿ. ಮಾನ್ಯ ಉಚ್ಚ ನ್ಯಾಯಾಲಯವು ಸಹ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ವಿದ್ಯಾರ್ಥಿಗಳ ಹಿತಕಾಯುವ ತೀರ್ಮಾನ ಕೂಡಲೆ ತೆಗೆದುಕೊಂಡು ಆದೇಶ ಹೊರಡಿಸಬೇಕಾಗಿ ವಿನಂತಿ.

-ಪ್ರೊ.ಕೆ.ಕೃಷ್ಣಮೂರ್ತಿ ಮಯ್ಯ ಬೆಂಗಳೂರು

ಮೂರನೇ ಅಲೆಯ ನಿರ್ಲಕ್ಷ್ಯ ಬೇಡ

ಸಂಭಾವ್ಯ ಕೋವಿಡ್ ಮೂರನೇ ಅಲೆ ನಮ್ಮ ದೇಶದಲ್ಲಿ ಕಾಣಿಸಿಕೊಳ್ಳುವ ಸಾಧ್ಯತೆ ತೀರಾ ಕಡಿಮೆ ಎಂದು ದೇಶದ ವೈದ್ಯ ವಿಜ್ಞಾನಿಗಳು ಹೇಳಿರುವುದು ಸರ್ಕಾರ ಮತ್ತು ಜನತೆ ನಿಟ್ಟುಸಿರು ಬಿಡುವಂತಾಗಿದೆ. ಅಮೆರಿಕ ಸೇರಿದಂತೆ ಐರೋಪ್ಯ ರಾಷ್ಟ್ರಗಳಲ್ಲಿ ಕೋವಿಡ್ ಮೂರನೇ ಅಲೆ ಭಾರಿ ಆತಂಕ ಸೃಷ್ಟಿಸಿರುವುದು ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಹೀಗಾಘಿ ಸರಕಾರ ಹಾಗೂ ಜನತೆ ಈ ಬಗ್ಗೆ ನಿರ್ಲಕ್ಷ್ಯ, ಅಸಡ್ಡೆ ತೋರುವಂತಿಲ್ಲ. ಏಕೆಂದರೆ, ಮೊದಲನೆ ಅಲೆ ಕಾಣಿಸಿಕೊಂಡ ನಂತರ ಸಂಭಾವ್ಯ ಎರಡನೇ ಅಲೆ ಬಗ್ಗೆ ಇದ್ದ ಉದಾಸೀನತೆಯೇ ಹೆಚ್ಚು ಹಾನಿ ಉಂಟು ಮಾಡಲು ಕಾರಣವಾಗಿತ್ತು. ಕೇಂದ್ರ ಸರ್ಕಾರದ ಇಚ್ಛಾಶಕ್ತಿಯ ಫಲವಾಗಿ ಕೋವಿಡ್ ಗೆ ದೇಶೀಯ ಲಸಿಕೆಗಳಾದ ಕೊವ್ಯಾಕ್ಸಿನ್, ಕೋವಿಶೀಲ್ಡ್ ಅಭಿವೃದ್ಧಿ ಪಡಿಸಲಾಯಿತು. ಆರಂಭದಲ್ಲಿ ಲಸಿಕಾ ಅಭಿಯಾನಕ್ಕೆ ದೇಶದ ಜನತೆಯಿಂದ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿತ್ತು.ಆದರೆ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳು, ನೌಕರರು ಹಾಗೂ ಸಿಬ್ಬಂದಿ ವರ್ಗದವರ ಪರಿಶ್ರಮದ ಕಾರಣ ದೇಶದಲ್ಲಿ ಈವರೆವಿಗೂ ಸುಮಾರು 100 ಕೋಟಿಗೂ ಅಧಿಕ ಡೋಸ್ ಲಸಿಕೆಯನ್ನು ಜನರಿಗೆ ನೀಡಲಾಗಿದ್ದು, ಇದರ ಪರಿಣಾಮವಾಗಿ ರೋಗ ನಿರೋಧಕ ಶಕ್ತಿ ಬಂದಿದ್ದು, ಸಂಭಾವ್ಯ ಮೂರನೇ ಅಲೆಗೆ ಬ್ರೇಕ್ ಹಾಕಲು ಕಾರಣವಾಗಿದೆ. ಈಹಂತದಲ್ಲಿ ಉದಾಸೀನ,ಅಸಡ್ಡೆ ತೋರುವಂತಿಲ್ಲ.ಈಗಾಗಲೇ, ಸಾರ್ವಜನಿಕರು ಕಡ್ಡಾಯವಾಗಿ ಮಾಸ್ಕ್ ಧರಿಸದೇ ಇರುವುದು, ಸಾರ್ವಜನಿಕ ಸ್ಥಳಗಳಲ್ಲಿ ಸಾಮಾಜಿಕ ಅಂತರ ಕಾಪಾಡಿಕೊಳ್ಳದೇ ಇರುವುದು ಸದ್ಯ ಎಲ್ಲೆಡೆ ಸಾಮಾನ್ಯವಾಗಿ ಕಂಡು ಬರುತ್ತಿರುವ ದೃಶ್ಯ. ಜನರ ನಿರ್ಲಕ್ಷ್ಯ ಮನೋಭಾವನೆಗೆ ಸರಕಾರ ಮತ್ತಷ್ಟು ತೀವ್ರವಾಗಿ ಜಾಗೃತಿ ಮೂಡಿಸುವ ಪ್ರಯತ್ನ ಆಗಬೇಕಿದೆ. ಅಲ್ಲದೇ ಜನರು ಕೂಡ ಸ್ವತಃ ಅರಿವು ಹೊಂದಬೇಕಿದೆ. ದೇಶದ ಆರೋಗ್ಯ ಇಲಾಖೆಯ ಸಿಬ್ಬಂದಿ,ಆಶಾ, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸರ್ಕಾರೇತರ ಸ್ವಯಂ ಸಂಸ್ಥೆಗಳ ಬದ್ಧತೆ, ಪ್ರಾಮಾಣಿಕ ಪರಿಶ್ರಮದ ಕಾರಣ ಸಂಭಾವ್ಯ ಮೂರನೇ ಅಲೆ ಬರದಂತೆ ತಡೆಗಟ್ಟಲು ಕಾರಣವಾಗಿದೆ.ಈ ಕಾರಣಕ್ಕೆ ಸರ್ಕಾರ ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿ ಅಭಿನಂದನಾರ್ಹರು!

-ಶ್ರೀಧರ್ ಡಿ.ರಾಮಚಂದ್ರಪ್ಪ ತುರುವನೂರು

ಭಟ್ಟಂಗಿಗಳ ದೂರವಿಡಿ ಜೋಶೀಯವರೇ!

ಕನ್ನಡ ಸಾಹಿತ್ಯ ಪರಿಷತ್ತಿನ ನೂತನ ಅದ್ಯಕ್ಷರಾಗಿ ಆಯ್ಕೆ ಆದ ಮಹೇಶ ಜೋಷಿ ಅವರಿಗೆ ಅಭಿನಂದನೆಗಳು. ದಾಖಲೆಯ ಗೆಲುವಿನ ಅಂತರವೇ ನೀವೆಷ್ಟು ಜನಪ್ರಿಯರು ಎಂದು ತಿಳಿಸುತ್ತದೆ. ಹೆಸರಿಗೆ ತಕ್ಕಂತೆ ಜನರಿಂದ ದೂರ ಮತ್ತು ಸರಕಾರಿ ಬಾಬುಗಳು ನಡೆಸಿ ಕೊಡುತ್ತಿದ್ದ ಸಪ್ಪೆ ಕಾರ್ಯಕ್ರಮಗಳಿಂದ ತುಂಬಿದ್ದ ದೂರದರ್ಶನ ವನ್ನು ನೀವು ನಿಮ್ಮ ಕ್ರಿಯಾಶೀಲತೆ ಮತ್ತು ಪ್ರತಿಭೆಇಂದ ವಿವಿಧ ಜನಪ್ರಿಯ ಕಾರ್ಯಕ್ರಮಗಳಿಂದ ಜನರಿಗೆ ಸಮೀಪ ಮಾಡಿದ್ದು ನಿಮ್ಮ ದೊಡ್ಡ ಸಾಧನೆಯೇ ಸರಿ, ಯಾಕೆಂದರೆ ಸರಕಾರಿ ಯಂತ್ರಾಂಗದಲ್ಲಿ ಪ್ರತಿಭೆಗಳು ಹೇಗೆ ಮುರುಟಿ ಹೋಗುತ್ತದೆ ಎಂದು ಎಲ್ಲರಿಗೂ ಗೊತ್ತು. ಬಹಳಷ್ಟು ಗೊಡ್ಡುಗಳಿಂದ ತುಂಬಿರುವ ಕಸಾಪ ಕಕ್ಕೆ ನಿಮ್ಮಂತವರ ಅಗತ್ಯ ತುಂಬಾ ಇತ್ತು, ದೂರದರ್ಶನದಲ್ಲಿ ಮಾಡಿದ ಜಾದೂ ಇಲ್ಲಿಯೂ ಮಾಡುತ್ತೀರಿ ಎಂದು ನಂಬಿದ್ದೇವೆ. ದಯವಿಟ್ಟು ನಿಮ್ಮ ಸುತ್ತ ಇರುವ ಕೆಲವು ಭಟ್ಟಂಗಿಗಳನ್ನು ದಯವಿಟ್ಟು ದೂರವಿಡಿ, ನಾನು ನಿಮ್ಮ ದೂರದರ್ಶನ ಹಲವು ಕಾರ್ಯಕ್ರಮಗಳಲ್ಲಿ ಬಾಗವಹಿಸಿದ್ದೇನೆ. ನಡುವೆ ಕೆಲವರು ನಿಮ್ಮನ್ನು ಇಂದ್ರ ಚಂದ್ರ ಎಂದು ಜೋರಾಗಿ ರಾಜಕೀಯ ನಾಯಕರನ್ನು ಕೂಗುವಂತೆ ಕೂಗುತ್ತಿದ್ದರು. ನೀವು ಕೂಡ ಅದನ್ನು ತಡೆಯಲು ಹೋಗುತ್ತಿರಲಿಲ್ಲ, ಬಹುಶಃ ಅದನ್ನೂ ನೀವು ಮನದಲ್ಲೇ ಇಷ್ಟ ಪಟ್ಟಿದ್ದಿರಿ ಅಂದುಕೊಳ್ಳುವೆ. ಆದರೆ ಈ ಭಟ್ಟಂಗಿಗಳು ಅಧಿಕಾರ ಇದ್ದಾಗ ಮಾತ್ರ ನಿಮ್ಮ ಸ್ತುತಿ ಮಾಡುತ್ತವೆ ಇದು ಈವಾಗ ನಿಮಗೂ ಅರ್ಥ ಆಗಿರಬಹುದು. ನಿಮ್ಮಿಂದ ಕಸಾಪ ಹೊಸ ಹೊಳಪು ಪಡೆಯಲಿ ಎಂದು ಹಾರೈಸುತ್ತ.

-ನರಸಿಂಹಮೂರ್ತಿ ಕಿತ್ತಾಗನೂರು

ಓದುಗರ ಓಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು